| | | |
|---|---|---|
| ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_10.3_DSERT | | ಕರ್ನಾಟಕ ಮಂಡಳಿ |
| ತರಗತಿ : 7 | ವಿಷಯ : ವಿಜ್ಞಾನ | ದಿನಾಂಕ : 27/07/2021 |
| ಅಧ್ಯಾಯದ ಕ್ರಮ ಸಂಖ್ಯೆ ಹಾಗು ಹೆಸರು : 10 – ಜೀವಿಗಳಲ್ಲಿ ಉಸಿರಾಟ | | |
| ಉಪ ಅಧ್ಯಾಯ : ಉಸಿರಾಟ ಮತ್ತು ನಾವು ಹೇಗೆ ಉಸಿರಾಡುತ್ತೇವೆ? | | |

**ವಿಭಾಗ - ೧**

| | |
|---|---|
| ಪ್ರಶ್ನೆ ೧) | ಸರಿ ಇರುವುದನ್ನು T ಎಂದು ಅಥವಾ ತಪ್ಪಾಗಿರುವುದನ್ನು F ಎಂದು ಗುರುತಿಸಿ. |
| (ಕ ) | ಉಸಿರಾಟ ಎಂದರೆ ಒಂದು ಸಲ ಉಸಿರು ತೆಗೆದು ಕೊಳ್ಳುವುದು ಮತ್ತು ಆನೇಕ ಸಲ ಉಸಿರು ಬಿಡುವುದು. |
| ಉತ್ತರ | T |
| (ಖ) | ಓರ್ವ ವಯಸ್ಕ ವ್ಯಕ್ತಿ ಸೆಕೆಂಡಿಗೆ 15 – 18 ಬಾರಿ ಉಸಿರಾಡುತ್ತಾನೆ. |
| ಉತ್ತರ | F<br>ಕಾರಣ : ಓರ್ವ ವಯಸ್ಕ ವ್ಯಕ್ತಿ ನಿಮಿಷಕ್ಕೆ 15 – 18 ಬಾರಿ ಉಸಿರಾಡುತ್ತಾನೆ. |
| ಪ್ರಶ್ನೆ ೨) | ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.<br>ಮೂಗಿನ ಕುಹರದಿಂದ ಗಾಳಿಯು _____ ತಲುಪುತ್ತದೆ.<br>ಅ) ಯಕೃತ್ತು<br>ಆ) ವಪೆ<br>ಇ) ಶ್ವಾಸಕೋಶ<br>ಈ) ಮೇಲಿನ ಯಾವುದು ಇಲ್ಲ |
| ಉತ್ತರ | ಇ) ಶ್ವಾಸಕೋಶ |
| ಪ್ರಶ್ನೆ ೩) ಕ) | ಬಿಟ್ಟ ಸ್ಥಳಗಳನ್ನು ತುಂಬಿರಿ :<br>ಧೂಮಪಾನದಿಂದ ಉಂಟಾಗುವ ರೋಗ _______ |
| ಉತ್ತರ | ಧೂಮಪಾನದಿಂದ ಉಂಟಾಗುವ ರೋಗ ಕ್ಯಾನ್ಸರ್. |
| ಖ) | _______ ಅಂಗಗಳ ಸಹಾಯದಿಂದ ಆಮ್ಲಜನಕ ಹೇರಳವಾಗಿರುವ ಗಾಳಿಯನ್ನು ಒಳಗೆಳೆದುಕೊಳ್ಳಬಹುದು. |
| ಉತ್ತರ | ಉಸಿರಾಟದ ಅಂಗಗಳ ಸಹಾಯದಿಂದ ಆಮ್ಲಜನಕ ಹೇರಳವಾಗಿರುವ ಗಾಳಿಯನ್ನು ಒಳಗೆಳೆದುಕೊಳ್ಳಬಹುದು. |
| | **ವಿಭಾಗ – ೨** |
| ಪ್ರಶ್ನೆ ೪) | ಹೊಂದಿಸಿ ಬರೆಯಿರಿ :<br>ಅ. ಉಸಿರಾಡಿ – ನಿಶ್ವಾಸ<br>ಆ. ಉಸಿರು ಹೊರಚೆಲ್ಲು – ಉಚ್ಛ್ವಾಸ |
| ಉತ್ತರ | ಅ. ಉಸಿರಾಡಿ – ಉಚ್ಛ್ವಾಸ |


ಆ. ಉಸಿರು ಹೊರಚೆಲ್ಲು – ನಿಶ್ವಾಸ

ಪ್ರಶ್ನೆ ೫) ಕೆಳಗಿನವುಗಳನ್ನು ವ್ಯಾಖ್ಯಾನಿಸಿ :

ಕ) ಶ್ವಾಸಕ್ರಿಯೆಯ ದರ

ಉತ್ತರ ಒಂದು ನಿಮಿಷದಲ್ಲಿ ವ್ಯಕ್ತಿಯೊಬ್ಬನ ಉಸಿರಾಟದ ಸಂಖ್ಯೆಯನ್ನು ಶ್ವಾಸಕ್ರಿಯೆಯ ದರ ಎನ್ನುವರು.

ಖ) ಕೆಳಗಿನ ಚಿತ್ರದಲ್ಲಿ ಗುರುತು ಮಾಡಿರುವ ಭಾಗಗಳನ್ನು ಹೆಸರಿಸಿ




ಉತ್ತರ

1. ನಾಸಿಕ ರಂಧ್ರ
2. ಬಾಯಿ ಕುಹರ
3. ಶ್ವಾಸಕೋಶ
4. ಶ್ವಾಸನಾಳ

**ವಿಭಾಗ – ೩**

ಕೆಳಗಿನ ಪ್ರಶ್ನೆಗಳಿಗೆ ವಾಕ್ಯಗಳಲ್ಲಿ ಉತ್ತರಿಸಿ:

ಪ್ರಶ್ನೆ ೬) ಉಚ್ಛ್ವಾಸ ಮತ್ತು ನಿಶ್ವಾಸದ ಅರ್ಥವನ್ನು ಬರೆಯಿರಿ.

ಉತ್ತರ ಆಮ್ಲಜನಕ ಹೇರಳವಾಗಿರುವ ಗಾಳಿಯನ್ನು ದೇಹದ ಒಳಗೆಳೆದುಕೊಳ್ಳುವುದಕ್ಕೆ ಉಚ್ಛ್ವಾಸ ಎನ್ನುವರು.
ಕಾರ್ಬನ್ ಡೈಆಕ್ಸೈಡ್ ಹೇರಳವಾಗಿರುವ ಗಾಳಿಯನ್ನು ಹೊರಬಿಡುವುದಕ್ಕೆ ನಿಶ್ವಾಸ ಎನ್ನುವರು.

ಪ್ರಶ್ನೆ ೭) ನಾವು ಹೇಗೆ ಶ್ವಾಸಕ್ರಿಯೆ ನಡೆಸುತ್ತೇವೆ?

ಉತ್ತರ ನಾವು ಸಮಾನ್ಯವಾಗಿ ನಾಸಿಕ ರಂಧ್ರಗಳ ಮೂಲಕ ಗಾಳಿಯನ್ನು ಒಳಗೆ ಎಳೆದುಕೊಳ್ಳುತ್ತೇವೆ. ನಾವು ಗಾಳಿಯನ್ನು ಒಳಗೆ ತೆಗೆದು ಕೊಂಡಾಗ ಅದು ನಾಸಿಕ ರಂಧ್ರಗಳ ಮೂಲಕ ನಾಸಿಕ ಕುಹರಕ್ಕೆ ಸಾಗಿಸಲ್ಪಡುತ್ತದೆ.
ನಾಸಿಕ ಕುಹರದಿಂದ ಗಾಳಿಯು ಶ್ವಾಸನಾಳದ ಮೂಲಕ ಶ್ವಾಸಕೋಶಗಳನ್ನು ತಲುಪುತ್ತದೆ.
ಶ್ವಾಸಕೋಶಗಳು
ಎದೆಯ ಕುರಹದಲ್ಲಿರುತ್ತದೆ. ಈ ಕುಹರವು ಬದಿಗಳಲ್ಲಿ ಪಕ್ಕೆಲುಬುಗಳಿಂದ ಆವರಿಸಲ್ಪಟ್ಟಿರುತ್ತದೆ. ಎದೆಯ ಕುರಹದ ತಳದಲ್ಲಿ ವಪೆ ಎಂದು ಕರೆಯಲಾಗುವ ದೊಡ್ಡದಾದ ಸ್ನಾಯುವಿನ ಹಾಳೆಯಿದೆ. ಶ್ವಾಸಕ್ರಿಯೆಯು
ವಪೆ ಮತ್ತು ಪಕ್ಕೆಲುಬುಗಳ ಚಾಲನೆಯನ್ನು ಒಳಗೊಂಡಿರುತ್ತದೆ.
ಉಚ್ಛ್ವಾಸದ ಸಮಯದಲ್ಲಿ ಪಕ್ಕೆಲುಬುಗಳು ಮೇಲೆ ಮತ್ತು ಹೊರಕ್ಕೆ ಮತ್ತು ವಪೆಯು ಕೆಳಕ್ಕೆ ಚಲಿಸುತ್ತದೆ. ಈ

| | |
|---|---|
| | ಚಲನೆಯು ನಮ್ಮ ಎದೆಯ ಕುಹರದಲ್ಲಿನ ಆವಾಕಾಶವನ್ನು ಹೆಚ್ಚಿಸುತ್ತದೆ ಮತ್ತು ಗಾಳಿಯು<br>ಶ್ವಾಸಕೋಶದೊಳಗೆ<br>ನುಗ್ಗುತ್ತದೆ. ಶ್ವಾಸಕೋಶಗಳು ಗಾಳಿಯಿಂದ ತುಂಬಿಕೊಳ್ಳುತ್ತದೆ. ನಿಶ್ವಾಸದಲ್ಲಿ ವಪೆಯು<br>ಅದರ ಮೊದಲಿನ ಸ್ಥಾನಕ್ಕೆ ಚಲಿಸುವರೊಂದಿಗೆ ಪಕ್ಕೆಲುಬುಗಳು ಕೆಳಕ್ಕೆ ಮತ್ತು ಒಳಕ್ಕೆ<br>ಚಲಿಸುತ್ತವೆ. ಇದು ಎದೆಕುರಹದ ಗಾತ್ರವನ್ನು<br>ಕಡಿಮೆ ಮಾಡುತ್ತದೆ ಮತ್ತು ಗಾಳಿಯು ಶ್ವಾಸಕೋಶಗಳಿಂದ ಹೊರಗೆ ಹೋಗುತ್ತದೆ. ಈ ರೀತಿ<br>ನಾವು ಶ್ವಾಸಕ್ರಿಯೆ<br>ನಡಿಸುತ್ತೇವೆ. |
| | |
| | |
| | |
| | |
| | |
| | |
| | |
| | |
| | |
| | |
| | |
| | |

eVidyaloka
To Educate - Anywhere Anytime

| | |
|---|---|
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |